ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
SJ
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 40॥ Udp/1263/2015-17 ॥ R.NO.50495/91 ॥ ತಾರೀಕು : 24–10–2017 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## “ಕಾಂಕ್ರಿಟ್ ಟೆಕ್ನಾಲಜಿಯಲ್ಲಿ ದೇಶಕ್ಕೆ ಸ್ಫೂರ್ತಿ , ಶಕ್ತಿ ಪ್ರೊ. ಎಂ.ಎಸ್.ಶೆಟ್ಟಿ

ಕುಂದಾಪುರದ ಬೋರ್ಡ್ ಹೈಸ್ಕೂಲ್ ವಿದ್ಯಾರ್ಥಿ, ಕೋಟೇಶ್ವರದ ಎಂ.ಸುಬ್ಬಣ್ಣ ಶೆಟ್ಟಿ , ಕುಂದಾಪುರ ತಾಲ್ಲೂಕು ಅಂದು ಕಂಡ ಪ್ರಥಮ ಇಬ್ಬರು ಸಿವಿಲ್ ಇಂಜಿನಿಯರ್‌ಗಳಲ್ಲಿ ಒಬ್ಬರು . ಭಾರತ ಸರಕಾರದ ರಕ್ಷಣಾ ಸಚಿವಾಲಯದಲ್ಲಿ ಶ್ರೇಷ್ಠ ಇಂಜಿನಿಯರ್ , ರಿಸರ್ಚ್ ವರ್ಕರ್, ಪ್ರೊಫೆಸರ್ , ಗೈಡ್ ಹಾಗೂ ತಜ್ಞತರಬೇತುದಾರ, ಸಲಹೆಗಾರರಾಗಿ ಸೇವೆ ಸಲ್ಲಿಸಿದವರು ಇವರು. ಕಾಂಕ್ರಿಟ್ ಟೆಕ್ನಾಲಜಿಯಲ್ಲಿರುವ ಅಪಾರ ಜ್ಞಾನ, ಅನುಭವದಿಂದ ದೇಶ ವಿದೇಶಗಳ ಬಹುಮಹಡಿ ಕಟ್ಟಡ ನಿರ್ಮಾಣದಲ್ಲಿ ಮಾರ್ಗದರ್ಶನ ಮಾಡಿದವರು. ಈಗ ಕೋಟೇಶ್ವರದಲ್ಲಿ ನೆಲೆ ನಿಂತರೂ 88ರ ಹರೆಯದಲ್ಲಿದ್ದರೂ ಇವರ ಸಲಹೆ ಪಡೆಯಲು ದೇಶದ ವಿವಿಧ ಕಡೆಯಿಂದ ಇವರಿಗೆ ಕರೆ ಬರುತ್ತಲೇ ಇರುತ್ತದೆ. ಇವರು ಕುಂದಾಪುರದ ಹೆಮ್ಮೆಯ ಪುತ್ರ.








ಇಂಡಿಯನ್ ಕಾಂಕ್ರಿಟ್ ಇನ್‌ಸ್ಟಿಟ್ಯೂಟ್ ಇತ್ತೀಚೆಗೆ ಕೋಟೇಶ್ವರದ ಪ್ರೊ ಎಂ.ಎಸ್. ಶೆಟ್ಟಿಯವರಿಗೆ “ಲೈಫ್ ಟೈಮ್ ಎಚೀವ್‌ಮೆಂಟ್ ಅವಾರ್ಡ್ 2017” ನೀಡಿ ಗೌರವಿಸಿತು. ಈ ಶ್ರೇಷ್ಠ ಗೌರವ ಪಡೆದ ಇಂಜಿನಿಯರ್ ತನ್ನ 63 ವರ್ಷದ ಸೇವಾ ಅನುಭವ ಗುರುತಿಸಿರುವುದಕ್ಕೆ ಖುಷಿ ಪಟ್ಟರೂ, ಈ ದೇಶಕ್ಕಾಗಿ ತನಗಿಂತ ಹೆಚ್ಚು ಸಾಧನೆ ಮಾಡಿದವರು ಸಾಕಷ್ಟಿದ್ದಾರೆ ಅಂದುಕೊಂಡವರು. ಕರ್ನಾಟಕದ 22 ಸಾವಿರ ಇಂಜಿನಿಯರ್ಸ್ ಸದಸ್ಯತ್ವ ಹೊಂದಿರುವ ಫೆಡರೇಶನ್ ಆಫ್ ಇಂಜಿನಿಯರ್ 2015ರ ಸೆಪ್ಟೆಂಬರ್ 15ರ ಇಂಜಿನಿಯರ್ಸ್ ಡೇ ದಿನ ಇವರನ್ನು ಗೌರವಿಸಿತ್ತು.

**Distinguished Sevice by an Engineer”** ಎಂದು ಇವರು ಸನ್ಮಾನಿಸಲ್ಪಟ್ಟಿದ್ದರು. ಆದರೆ ಹುಟ್ಟೂರಲ್ಲಿ ಇವರು ಸುದ್ಧಿಯಾಗಲಿಲ್ಲ.

ಕಾಂಕ್ರಿಟ್ ಟೆಕ್ನಾಲಜಿ (CONCRETE TECHNOLOGY) ಎಂದು ಇವರು ಬರೆದು ಎಸ್.ಚಾಂದ್ ಪಬ್ಲಿಷರ್ಸ್ ದೆಹಲಿ ಪ್ರಕಟಿಸಿರುವ ಪುಸ್ತಕ ಇಂದು ಪಠ್ಯಪುಸ್ತಕವಾಗಿ, ಮಾರ್ಗದರ್ಶಿಯಾಗಿ ದೇಶದ ತಂತ್ರಜ್ಞರ ಅಗತ್ಯದ ಗ್ರಂಥದಲ್ಲಿ ಒಂದಾಗಿದೆ. ಈಗಾಗಲೇ 49 ಬಾರಿ ಮರುಮುದ್ರಣಗೊಂಡಿರುವ ಈ ಪುಸ್ತಕ ಎಂ.ಎಸ್.ಶೆಟ್ಟಿಯವರಿಗೆ ಅಪಾರ ಖ್ಯಾತಿ ತಂದುಕೊಟ್ಟಿದೆ. “ಕಾಂಕ್ರಿಟ್ ಟೆಕ್ನಾಲಜಿ” ಥಿಯರಿ ಎಂಡ್ ಪ್ರಾಕ್ಟೀಸ್” ಇಂದು ಭಾರತ ಹಾಗೂ ವಿದೇಶದ ಬಹುತೇಕ ಯುನಿವರ್ಸಿಟಿಗಳಲ್ಲಿ ಪಠ್ಯ ಪುಸ್ತಕವಾಗಿದೆ.

4 ಲಕ್ಷಕ್ಕೂ ಹೆಚ್ಚು ಪ್ರತಿಗಳು ದೇಶವಿದೇಶಗಳಲ್ಲಿ ಮಾರಾಟಗೊಂಡಿವೆ. ಲಕ್ಷಾಂತರ ಸಿವಿಲ್ ಇಂಜಿನಿಯರ್‌ಗಳಿಗೆ ದಾರಿದೀಪವಾಗಿದೆ.

ಕಾಂಕ್ರಿಟ್ ಟೆಕ್ನಾಲಜಿ ಮೂಲಕ ಇವರು ನೀಡಿದ ಜ್ಞಾನ, ಮಾರ್ಗದರ್ಶನ ಹಾಗೂ ಶ್ರೇಷ್ಠ ಕೊಡುಗೆಗಾಗಿ ಇವರನ್ನು **ಫಾದರ್ ಫಿಗರ್ ಆಫ್ ಕಾಂಕ್ರಿಟ್ ಟೆಕ್ನಾಲಜಿ** ಎಂದು ಕರೆಯುತ್ತಾರೆ.

ಕೋಟೇಶ್ವರದ ಬಂಟ್ಸಾಲೆ ವೆಂಕಪ್ಪ ಶೆಟ್ಟಿ– ಸೀತಮ್ಮ ಶೆಡ್ತಿ ದಂಪತಿ ಪುತ್ರರಾದ ಸುಬ್ಬಣ್ಣ ಶೆಟ್ಟಿಯವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ವಕ್ವಾಡಿ ಹಾಗೂ ಕೋಟೇಶ್ವರ ಸರಕಾರಿ ಶಾಲೆಗಳಲ್ಲಿ ಪಡೆದರು. ಆ ನಂತರ ಪ್ರೌಢ ಶಿಕ್ಷಣವನ್ನು ಕುಂದಾಪುರ ಬೋರ್ಡ್ ಹೈಸ್ಕೂಲ್ (ಇಂದಿನ ಸ.ಪ.ಪೂ.ಕಾಲೇಜು)ನಲ್ಲಿ ಪಡೆದರು. ಮಂಗಳೂರಿನ ಸೈಂಟ್ ಅಲೋಷಿಯಸ್ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್ ಶಿಕ್ಷಣ ಪಡೆದರು. ಮದ್ರಾಸಿನ ಅಣ್ಣಾಮಲೈ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರ್ ಶಿಕ್ಷಣ ಪಡೆದರು.

(6ನೇ ಪುಟಕ್ಕೆ)

## ಕುಂದಾಪುರದಲ್ಲಿ ಎನ್.ಆರ್ಸ್. ನಂದಿನಿ ಡಿಲಕ್ಸ್ ರೆಸ್ಟೋರೆಂಟ್ ಉದ್ಘಾಟನೆ









ಎನ್.ಆರ್.ನಾರಾಯಣ ರಾಯರು , ನೇರಂಬಳ್ಳಿ ರಾಘವೇಂದ್ರರಾಯರು ಶ್ರದ್ದೆಯಿಂದ ಉತ್ತಮ ಗುಣಮಟ್ಟದಲ್ಲಿ ಹೋಟೆಲ್ ಉದ್ಯಮ ನಡೆಸಿಕೊಂಡು ಬರುತ್ತಾ ಸಾಮಾಜಿಕ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವುದು ಅವರು ಸಾರ್ವಜನಿಕ ಜೀವನದಲ್ಲಿ ಯಶಸ್ವಿಯಾಗಲು ಕಾರಣ. ಹರಿಯುವ ನೀರಿನಂತೆ ಶುದ್ಧವಾಗಿ , ನಿರಂತರ ಕ್ರಿಯಾಶೀಲತೆಯಿಂದ ಗುಣಮಟ್ಟದ ಜೀವನವನ್ನು ಅವರು ನಡೆಸಿರುವುದರಿಂದ, ಎಲ್ಲರ ಪ್ರೀತಿ ಗೌರವ ಪಡೆದಿದ್ದಾರೆ. ಬೆಳೆಯುತ್ತಿರುವ ಕುಂದಾಪುರದಲ್ಲೊಂದು ಉತ್ತಮ ಹೋಟೆಲ್ ಸ್ಥಾಪಿಸಿ ಜನರು ಕುಟುಂಬ ಸದಸ್ಯರೊಂದಿಗೆ ಬಂದು ಊಟ,ಉಪಾಹಾರ ಮಾಡುವಂತೆ ಹೋಟೇಲ್ ಸ್ಥಾಪಿಸಬೇಕೆನ್ನುವ ಕನಸಿನಂತೆ ವ್ಯವಸ್ಥಿತವಾದ ಎನ್.ಆರ್ಸ್ ನಂದಿನಿ ಡಿಲಕ್ಸ್ ಹೋಟೇಲ್ ಆರಂಭಿಸಿರುವುದು ಅಭಿನಂದನೀಯವಾಗಿದೆ. ರುಚಿ ಶುಚಿಯನ್ನು ಕಾಪಾಡಿಕೊಂಡು ಜನರ ಮನದಿಂಗಿತ ಅರಿತು ಈ ಉದ್ಯಮ ನಡೆಸಲ್ಪಡಲಿ. ಕುಂದಾಪುರ ಜನತೆಯ ಮೆಚ್ಚುಗೆ ಗಳಿಸಲಿ ಎಂದು ಕುಂದಾಪುರದ ' ಶಿವಪ್ರಸಾದ್ ಗ್ರ್ಯಾಂಡ್ ಕಾಂಪ್ಲೆಕ್ಸ್‌ನಲ್ಲಿ ನೂತನವಾಗಿ ಆರಂಭವಾದ ಎನ್.ಆರ್ಸ್. ನಂದಿನಿ ಡಿಲಕ್ಸ್ ವೆಜಿಟೇರಿಯನ್ ರೆಸ್ಟೋರೆಂಟ್ ಉದ್ಘಾಟಿಸುತ್ತಾ ರಾಷ್ಟ್ರೀಯ ಸ್ವಯಂ ಸೇವಕ ಸಂಘ ನಾಗಪುರ ಇದರ ಅಖಿಲ ಭಾರತ ವ್ಯವಸ್ಥಾ ಪ್ರಮುಖ್ ಮಂಗೇಶ್ ಬೇಂಡೇಜಿ , ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಪ್ರಚಾರಕ ಸು.ರಾಮಣ್ಣ, ಬಸ್ರೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಧರ್ಮದರ್ಶಿ ಅಪ್ಪಣ್ಣ ಹೆಗ್ಡೆ, ಮಾಜಿ ಶಾಸಕ ಎ.ಜಿ.ಕೊಡ್ಗಿ, ಕರ್ಣಾಟಕ ಬ್ಯಾಂಕ್‌ನ ಜನರಲ್ ಮನೇಜರ್ ರಾಘವೇಂದ್ರ ಭಟ್, ಶಿವಪ್ರಸಾದ್ ಗ್ರ್ಯಾಂಡ್ ಮಾಲಕ ಅರುಣ್ ಕುಮಾರ್ ಶೆಟ್ಟಿ, ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಡಾ|ಎಚ್.ಶಾಂತಾರಾಮ್ ಹೇಳಿದರು.

ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ, ಆರ್.ಎಸ್.ಎಸ್. ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್, ಪುರಸಭೆಯ ಅಧ್ಯಕ್ಷೆ ವಸಂತಿ ಸಾರಂಗ, ಉಪಾಧ್ಯಕ್ಷ ರಾಜೇಶ್ ಕಾವೇರಿ, ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯ ರಾಜೇಶ್ ಕಾರಂತ, ಸಮಾಜ ಸೇವಕ ಶಿವರಾಮ ಶೆಟ್ಟಿ, ಕಿರಣ್ ಕುಮಾರ್ ಕೊಡ್ಗಿ, ಕುಂದೇಶ್ವರ ದೇವಸ್ಥಾನದ ಧರ್ಮದರ್ಶಿ ಕೃಷ್ಣಾನಂದ ಚಾತ್ರ, ಕಲಾಕ್ಷೇತ್ರದ ಕುಂದಾಪುರದ ಅಧ್ಯಕ್ಷ ಕಿಶೋರ್ ಕುಮಾರ್, ಉದ್ಯಮಿ ಅಭಿನಂದನ್ ಶೆಟ್ಟಿ, ಹೈದರಾಬಾದ್‌ನ ಎಂ.ಎಲ್.ಸಿ. ರಾಮಚಂದ್ರ ರಾವ್ ಮೊದಲಾದವರು ಉಪಸ್ಥಿತರಿದ್ದರು.

ಎನ್.ಆರ್. ನಂದಿನಿ ಡಿಲಕ್ಸ್ ವೆಜಿಟೇರಿಯನ್ ರೆಸ್ಟೋರೆಂಟ್‌ನ ಮಾಲಕ ಎನ್.ಆರ್.ರಾಘವೇಂದ್ರ ರಾವ್ ಸ್ವಾಗತಿಸಿ, ಕುಂದಾಪುರದಲ್ಲಿ ಉತ್ತಮವಾದ ಒಂದು ಹೋಟೇಲ್ ಆರಂಭಿಸಬೇಕೆಂಬ ಆಶಯಕ್ಕೆ ಊರಿನವರ ಉತ್ತಮ ಪ್ರೋತ್ಸಾಹ ದೊರಕಿದೆ. ಈ ಹೋಟೆಲ್ ಮೂಲಕ

(12ನೇ ಪುಟಕ್ಕೆ)